# ಅಲ್ಲಿದ್ದದ್ದು ಹೆಮ್ಮೆಯ ಭಾವವಲ್ಲ

■ ನೀಲಾ ಎಂ.ಎಚ್.

ನನ್ನೂರು ಮೈಸೂರಿನಲ್ಲಿ ಪದವಿಗೆ ಮಹಾರಾಜ ಕಾಲೇಜಿಗೆ ಸೇರಲು ನಿರ್ಧರಿಸಿದ್ದೆ. ‘ಫ್ರೆಂಡ್ ಜೊತೆ ಹೋಗಿ ಅಪ್ಲಿಕೇಶನ್ ತಗೊಂಡು ಬಾ’ ಅಂದಿದ್ದರು ಅಪ್ಪ. ‘ಓ ಆಯ್ತು’ ಎಂದು ಹೇಳಿ, ಗೆಳತಿಯ ಜೊತೆ ಅತ್ಯುತ್ಸಾಹದಿಂದ ಕಾಲೇಜಿಗೆ ಹೊರಟೆ. ಮೆಟ್ಟಿಲು ಹತ್ತಿ, ಮೊದಲ ಮಹಡಿಯಲ್ಲಿದ್ದ ಕಚೇರಿಯತ್ತ ಹೊರಳುತ್ತಿದ್ದಂತೆಯೇ ಅಲ್ಲಿ ಉದ್ದಾನುದ್ದ ಕ್ಯೂ ನಿಂತಿದ್ದ ಹುಡುಗರ ದಂಡು ನೋಡಿ ಗಾಬರಿಯಾಗಿತ್ತು. ಇಬ್ಬರೂ ಹೋದಷ್ಟೇ ವೇಗವಾಗಿ ವಾಪಸ್ ಓಡಿಬಂದಿದ್ದೆವು. ಹೈಸ್ಕೂಲ್, ಪಿಯುಸಿ ಎಲ್ಲವನ್ನೂ ಹೆಣ್ಣುಮಕ್ಕಳಷ್ಟೇ ಇದ್ದ ಶಾಲಾಕಾಲೇಜಿನಲ್ಲಿ ಓದಿದ್ದವಳು ನಾನು. ಮನೆಯಲ್ಲೂ ಗಂಡುಮಕ್ಕಳು ಇರಲಿಲ್ಲ.



ಮನೆಗೆ ಬಂದು ಅಪ್ಪನಿಗೆ ‘ನಾನಂತೂ ಹೋಗಲ್ಲ, ಅಷ್ಟೊಂದು ಹುಡುಗರಿದ್ದಾರೆ, ನೀವೇ ತನ್ನಿ’ ಅಂದಿದ್ದೆ. ‘ಸರಿ’ ಎಂದಷ್ಟೇ ಹೇಳಿದ್ದ ಅಪ್ಪ, ರಾತ್ರಿ 8 ಗಂಟೆ ಹೊತ್ತಿಗೆ ‘ಇಬ್ಬರೂ ಬೇಗ ರೆಡಿಯಾಗಿ, ಸೆಕೆಂಡ್ ಶೋ ಸಿನಿಮಾಗೆ ಹೋಗೋಣ’ ಎನ್ನುತ್ತಾ ತಂಗಿಯನ್ನೂ ನನ್ನನ್ನೂ ಹೊರಡಿಸಿಕೊಂಡು ಹೊರಟರು. ಅದು ಮಾಲಾಶ್ರೀ ಅವರ ‘ಎಸ್.ಪಿ. ಭಾರ್ಗವಿ’ ಸಿನಿಮಾ. ನೋಡಿಕೊಂಡು ತಮ್ಮ ಲೂನಾದಲ್ಲಿ ಇಬ್ಬರನ್ನೂ ಕೂರಿಸಿಕೊಂಡು ವಾಪಸ್ ಹೊರಟಾಗ ಅಪ್ಪ ಕೇಳಿದ್ದರು ‘ಮಗಳೇ ನಾನು ನಿನ್ನನ್ನು ಈ ಫಿಲಂಗೆ ಯಾಕೆ ಕರ್ಕೊಂಡು ಬಂದೆ ಗೊತ್ತೇನಪ್ಪಾ? ನಾಳೆ ನಿನಗೆ ಕಾಲೇಜಿಗೆ ಹೋಗಿ ಅಪ್ಲಿಕೇಶನ್ ತರುವ ಧೈರ್ಯ ಬರಲಿ ಅಂತ. ಈಗಲೇ ಇಷ್ಟು ಹೆದರಿದರೆ ಇನ್ನು ಕಾಲೇಜಿಗೆ ಹೇಗೆ ಹೋಗುತ್ತೀ’ ಎಂದಿದ್ದರು.

ಗಂಡು ಮಕ್ಕಳಿಲ್ಲ ಎಂದು ಒಂದು ದಿನವೂ ಕೊರಗದೆ, ತನ್ನಿಬ್ಬರು ಹೆಣ್ಣುಮಕ್ಕಳನ್ನು ಯಾವುದೇ ಭೇದವಿಲ್ಲದೆ ಬೆಳೆಸಿದವರು ನನ್ನಪ್ಪ. ಹೆಣ್ಣಿನ ಶೋಷಣೆ, ತಾರತಮ್ಯ, ಭ್ರೂಣ ಹತ್ಯೆ, ಪುರುಷ ಪ್ರಧಾನ ಸಮಾಜ... ಇಂತಹ ಗಂಭೀರವಾದ ವಿಷಯಗಳ ಬಗ್ಗೆಯೆಲ್ಲ ನಮಗೆ ತಿಳಿದದ್ದೇ ನಾವು ಎಷ್ಟೋ ದೊಡ್ಡವರಾದ ಮೇಲೆ. ಆದರೆ, ಸ್ವಾತಂತ್ರ್ಯಕ್ಕೂ ಸ್ವೇಚ್ಛೆಗೂ ಇರುವ ವ್ಯತ್ಯಾಸ ನಿಮಗೆ ತಿಳಿದಿರಲೇಬೇಕು ಎಂದು ಆಗಾಗ್ಗೆ ಹೇಳುವುದನ್ನು ಮಾತ್ರ ಅವರು ಮರೆಯುತ್ತಿರಲಿಲ್ಲ.

ಅಂತಹ ಅಪ್ಪನನ್ನು ಕಳೆದುಕೊಂಡಾಗ ಸಹಜವಾಗಿಯೇ ಕುಸಿದುಹೋಗಿದ್ದೆ. ‘ನನ್ನ ದೊಡ್ಡ ಮಗಳು’ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ, ‘ಮುಂದೆ ನನಗೆ ನೀನೇ ಕೊಳ್ಳಿ ಇಡಬೇಕು’ ಎನ್ನುತ್ತಿದ್ದ ಅಪ್ಪನ ಮಾತುಗಳು ಕಿವಿಯನ್ನು ಇರಿಯುತ್ತಿದ್ದವು. ಯಾವುದಾದರೂ ಕಾರಣಕ್ಕೆ ಅನ್ಯಮನಸ್ಕಳಾದಾಗಲೆಲ್ಲ ‘ಹಿರಿಯ ಮಗಳು ಮನೆಗೆ ಆಧಾರಸ್ತಂಭ ಇದ್ದಂತೆ. ನೀನೇ ಎದೆಗುಂದಿದರೆ ಹೇಗೆ’ ಎನ್ನುತ್ತಿದ್ದ ಅಪ್ಪನ ಮಾತೇ ಆ ಹೊತ್ತಿಗೂ ನನ್ನ ಕೈಹಿಡಿಯಿತು. ಹೆಗಲ ಮೇಲೆ ಹೊತ್ತ ಗಡಿಗೆಯನ್ನು ಹಿಂದಕ್ಕೆ ಬೀಳಿಸಿ ಚಿತೆಗೆ ಅಗ್ನಿಸ್ಪರ್ಶ ಮಾಡಿದಾಗ, ಹಿಂದೆಯೇ ಬಂದಿದ್ದ ತಂಗಿಯೂ ಕೈಗೂಡಿಸಿದ್ದಳು. ನಮ್ಮನ್ನು ಪೊರೆದಿದ್ದ ಆ ಕಾಯವನ್ನು ಕೈಯಾರೆ ಅಗ್ನಿಗೆ ಅರ್ಪಿಸಿ ಬಂದು, ಅಮ್ಮನನ್ನು ಸಂತೈಸಬೇಕೆಂಬ ಪರಿವೆಯೂ ಇಲ್ಲದೆ ಇಬ್ಬರೂ ತಬ್ಬಿಕೊಂಡು ಗಳಗಳನೆ ಅತ್ತಿದ್ದೆವು. ಅಲ್ಲಿ, ಹುಡುಗನೊಬ್ಬ ಮಾಡುವ ಕೆಲಸವನ್ನು ನಾನೂ ಮಾಡಿದೆ ಎಂಬ ಅಹಂ ಆಗಲಿ, ಏನೋ ಸಾಧಿಸಿಬಿಟ್ಟೆ ಎಂಬ ಹೆಮ್ಮೆಯ ಭಾವವಾಗಲಿ ಯಾವುದೂ ಇರಲಿಲ್ಲ. ಅಲ್ಲಿದ್ದದ್ದು, ಪ್ರೀತಿಪಾತ್ರ ಜೀವವೊಂದನ್ನು ಶಾಶ್ವತವಾಗಿ ಕಳೆದುಕೊಂಡ ಆಘಾತ ಮತ್ತು ಅನಾಥಭಾವ ಮಾತ್ರ.

ಮರುದಿನ ‘ನಾನೂ ಕೇಶಮುಂಡನ ಮಾಡಿಸಿಕೊಳ್ಳಬೇಕೇ’ ಎಂದು ದಿಗಿಲಿನಿಂದ ಕೇಳಿದಾಗ ಪುರೋಹಿತರು ‘ಬೇಡಮ್ಮ, ಪಂಚಮುಡಿ ಕೊಟ್ಟರಾಯಿತು. ಬೆಳಿಗ್ಗೆ 5 ಗಂಟೆಗೆ ಬರುತ್ತೇನೆ, ರೆಡಿಯಾಗಿರಿ’ ಎಂದಿದ್ದರು. ಅದರಂತೆ, ತಲೆಯ ಅಲ್ಲಲ್ಲಿ ಐದು ಕಡೆ ಸಾಂಕೇತಿಕವಾಗಿ ಕೂದಲು ತೆಗೆದಿದ್ದರು. ಮುತ್ತತ್ತಿಯಲ್ಲಿ ಮೈನಡುಗಿಸುತ್ತಿದ್ದ ಕಾವೇರಿಯ ನೀರಿನಲ್ಲಿ ಅಸ್ಥಿ ವಿಸರ್ಜಿಸುವಾಗಲೂ ಅಪ್ಪನೇ ಹೆಗಲ ಮೇಲೆ ಕೈಯಿಟ್ಟು ಸಂತೈಸುತ್ತಿರುವಂತೆ ಭಾಸವಾಗಿತ್ತು.

‘ನಿನ್ನದು ಅಂತರ್ಜಾತಿ ವಿವಾಹ. ಅಂತ್ಯಸಂಸ್ಕಾರದ ಸ್ಥಳಕ್ಕೆ ಹೆಣ್ಣುಮಕ್ಕಳನ್ನು ಕರೆದೊಯ್ಯುವುದೇ ನಿಷಿದ್ಧವಾಗಿರುವ ಮೇಲ್ವರ್ಗದ ಹುಡುಗನನ್ನು ಮದುವೆಯಾಗಿದ್ದೀಯ. ಈಗ ನೀನೇ ಅಪ್ಪನ ಅಂತ್ಯಸಂಸ್ಕಾರ ಮಾಡಿರುವುದಕ್ಕೆ ನಿನ್ನ ಅತ್ತೆ ಮನೆಯವರು ಏನೂ ಹೇಳುವುದಿಲ್ಲವಾ’ ಎಂದು ಕಸಿನ್ ಒಬ್ಬಳು ಆತಂಕದಿಂದ ಪಿಸುಗುಟ್ಟಿದ್ದಳು. ಆಗಲೂ ಅಲ್ಲಿ ಬೇರ್ಯಾವ ಭಾವವೂ ಇರಲಿಲ್ಲ. ಅಲ್ಲಿದ್ದದ್ದು, ನನ್ನ ಮತ್ತು ನನ್ನಪ್ಪನ ನಡುವಿನ ಆತ್ಮಾನುಸಂಧಾನ ಮತ್ತು ಸರಿ ಕಂಡದ್ದನ್ನು ವಿವೇಚನೆಯಿಂದ ಮಾಡುವ, ಅದರ ಆಗುಹೋಗುಗಳೆಲ್ಲವನ್ನೂ ದಿಟ್ಟವಾಗಿ ಎದುರಿಸಲು ಸಾಧ್ಯವಾಗುವಂತೆ ನನ್ನಪ್ಪ ನನ್ನಲ್ಲಿ ತುಂಬಿದ್ದ ಆತ್ಮವಿಶ್ವಾಸ ಮಾತ್ರ. ■

ಸಮಾಜದಲ್ಲಿ ‘ಹೆಣ್ಣು’ ಎಂಬ ಕಾರಣಕ್ಕೆ ಎದುರಾಗುವ ತರತಮಗಳು ಹಲವು. ಹೆತ್ತವರ ಅಂತ್ಯಸಂಸ್ಕಾರದ ವಿಷಯದಲ್ಲಿಯೂ ಈ ಪಕ್ಷಪಾತ ಮುಂದುವರೆಯುತ್ತದೆ. ‘ಹೆಣ್ಣುಮಕ್ಕಳು ಹೆತ್ತವರ ಅಂತ್ಯಸಂಸ್ಕಾರ ಮಾಡಬಹುದೇ?’ —ಈ ಪ್ರಶ್ನೆ ಸಮಾಜದಲ್ಲಿ ಆಗಾಗ ಚರ್ಚೆಗೆ ಈಡಾಗುತ್ತಲೇ ಇರುತ್ತದೆ. ತಮ್ಮ ತಂದೆ ತಾಯಿಯ ಜವಾಬ್ದಾರಿಯನ್ನು ಪ್ರೀತಿಯಿಂದಲೇ ಹೊತ್ತು ನಿಭಾಯಿಸಿದ್ದ ಹೆಣ್ಣುಮಕ್ಕಳಿಗೆ ಅವರ ಕ್ರಿಯಾಕರ್ಮಗಳನ್ನು ಮಾಡುವ ಹಕ್ಕು ಇಲ್ಲವೇ? ಈ ಬಗ್ಗೆ ನಿಮ್ಮ ಅನಿಸಿಕೆ, ಅನುಭವಗಳಿದ್ದರೆ ಹಂಚಿಕೊಳ್ಳಬಹುದು. ಬರಹ 150 ಪದಮಿತಿಯಲ್ಲಿರಲಿ. ಕೊನೆಯ ದಿನ ಆಗಸ್ಟ್ 17. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. editorsu@sudha.co.inಗೆ ಬರೆದು ಕಳುಹಿಸಿ.